ದಿನಾಂಕಃ 06-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ-**

ದಾವಾ ಆಸ್ತಿ ನನ್ನ ತಂದೆ ಕೊಂಡು ಕೊಂಡಾಗ ನನ್ನ ವಯಸ್ಸು 24 ಇರಬಹುದು. ನಮ್ಮ ತಂದೆಯ ಜೊತೆ ನಾನು ನೋಂದಣಿ ಕಛೇರಿಗೆ ಬಂದಿರಲಿಲ್ಲ. ದಾವಾ ಆಸ್ತಿಯನ್ನು ಖರೀದಿಸಿ 8-9 ವರ್ಷಗಳ ನಂತರ ನನ್ನ ತಂದೆ ತೀರಿಕೊಂಡಿದ್ದಾರೆ. ದಾವಾ ಆಸ್ತಿಯ ಮ್ಯುಟೇಶನ್ ಕೂಡಾ ಮಾಡಿಸಿಕೊಂಡಿದ್ದಾರೆ. ಸದರಿ ಆದೇಶ 1982-83 ನೇ ಸಾಲಿನಲ್ಲಿ ಆಗಿರುತ್ತದೆ. ಅದರ ಎಂ.ಆರ್ ನಂಬರ ನನಗೆ ಗೊತ್ತಿಲ್ಲ. ಎಂ.ಆರ್ ನಕಲು ಮತ್ತು ಇ.ಸಿ.ಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಮ್ಮ ತಂದೆಯ ಮರಣ ನಂತರ ನಮ್ಮ ಅಣ್ಣ ಕೆ.ಎಂ ಸಿದ್ಧರಾಮಯ್ಯನವರು ತಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ.

ಈ ದಾವೆಯನ್ನು ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಬಾಯಿ ಮಾತಿನ ಮೂಲಕ ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳಲಾಗಿದೆ. ವಿಭಾಗದಲ್ಲಿ ನನಗೆ 32 ಗುಂಟೆ ಜಮೀನು ಬಂದಿರುತ್ತದೆ. ಉಳಿದ ನನ್ನ ಅಣ್ಣ ತಮ್ಮಂದಿರಿಗೆ ಕೂಡಾ ಭಾಗ ಕೊಡಲಾಗಿದೆ. ನನ್ನ ಸಹೋದರರಿಗೆ ಅಂದಾಜು ಬೇರೆ ಬೇರೆ ಜಮೀನುಗಳಲ್ಲಿ ಒಟ್ಟು 4 ಎಕರೆ ಜಮೀನು ಬಂದಿರುತ್ತವೆ. ನಮ್ಮಕುಟುಂಬದಲ್ಲಿ ಯಾವುದೇ ಜುಬಾನಿ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಜುಬಾನಿ ಹಿಸ್ಸೆ ಆಗಿದ್ದಲ್ಲಿ ಮುಟ್ಯೇಶನ್ ಆದೇಶಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಹಿಸ್ಸೆ ಆಗಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ನಮ್ಮ ತಂದೆ ಒಬ್ಬ ನಂಜುಂಡಯ್ಯನವರ ಮಕ್ಕಳ ಕಡೆಯಿಂದ ಖರೀದಿ ಮಾಡಿದ್ದಾರೆ. ನಂಜುಂಡಯ್ಯನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅವರ ಹೆಸರು -ಟಿ.ಎನ್. ಮಲ್ಲಯ್ಯ, ಡಿ.ಎನ್. ಮಲ್ಲಯ್ಯ, ಡಿ.ಎನ್ ಮಲ್ಲಮ್ಮ ಮತ್ತು ಗಂಗಮ್ಮ. ಸದರಿ ಗಂಗಮ್ಮ ಈಕೆಯು ನಮ್ಮ ತಂದೆಯ ಖರೀದಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಆ ವೇಳೆಗೆ ಅವರು ಮದುವೆ ಆಗಿತ್ತು ಎಂದು ಹೇಳುತ್ತಾರೆ. ಟಿ.ಎನ್.ಮಲ್ಲಯ್ಯ , ಡಿ.ಎನ್. ಮಲ್ಲಮ್ಮ ಇವರ ಹೆಸರಿನಲ್ಲಿ ಖರೀದಿ ಕೊಡುವ ಸಮಯದಲ್ಲಿ ಖಾತೆ ಇರಲಿಲ್ಲ ಎಂದರೆ ಸರಿ. ಅದಕ್ಕೂ ಮೊದಲು ನಂಜುಂಡಯ್ಯನವರ ಹೆಸರಿಗೂ ಖಾತೆ ಇರಲಿಲ್ಲ ಎಂದರೆ ಸರಿ, ಆದರೆ ಅವರ ಭಾಗಕ್ಕೆ ಜಮೀನು ಇತ್ತು.

ನಂಜುಂಡಯ್ಯನವರ ಅಣ್ಣನ ಹೆಸರು ಹುಲಿಯಯ್ಯ. ನಂಜುಂಡಯ್ಯನವರ ಮತ್ತು ಹುಲಿಯಯ್ಯ ತಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ, ಬಾಯಿ ಮಾತಿನಿಂದ ಭಾಗ ಮಾಡಿಕೊಂಡಿದ್ದಾರೆ. ನಾಲ್ಕನೇ ಪ್ರತಿವಾದಿಗೆ ತೊಂದರೆ ಕೊಡಲು ಮತ್ತು ಅಕ್ರಮವಾಗಿ ಆಸ್ತಿಯನ್ನು ಪಡೆಯಲು ಕಟ್ಟು ಕಥೆಯ ಮೇಲೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮಾರಾಟ ಮಾಡಲು ಮಾರಾಟಗಾರರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ, ಆ ಕಾರಣ ನಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಕಾನೂನು ಬದ್ಧ ಹಕ್ಕು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸುಮಾರು ತೆಂಗೀನ ಗಿಡಗಳು ಇವೆ ಎಂದರೆ ಸರಿ, 45 ಗಿಡಗಳು ಇವೆ. ಕೇವಲ 36 ಗಿಡಗಳು ಇವೆ ಎಂದರೆ ಸರಿಯಲ್ಲ. ಸದರಿ ಗಿಡಗಳನ್ನು ಪ್ರತಿವಾದಿಗಳೆ ಬೆಳೆಸಿದ್ದಾರೆ ಎಂದರೆ ಸರಿಯಲ್ಲ. ತೆಂಗನ್ನು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಬೇರೆ ಬೆಳೆ ಬೆಳೆಯಲು ಆಗುವುದಿಲ್ಲ ಎಂದರೆ ಸರಿ. ತೆಂಗಿನ ಗಿಡಗಳಿಂದ ಜವಳು ಭೂಮಿ ಆದ ಕಾರಣ ಕಡಿಮೆ ಫಸಲು ಬರುತ್ತದೆ ಎಂದರೆ ಸರಿಯಲ್ಲ. ನಂಜುಂಡಯ್ಯನ ಮಗಳು ಗಂಗಮ್ಮ ಈಗಲೂ ಬದುಕಿದ್ದಾರೆ ಎಂದರೆ ಸರಿ.

ನಮ್ಮ ತಂದೆ ಕೊಂಡು ಕೊಳ್ಳುವ ಕಾಲಕ್ಕೆ ದಾವಾ ಆಸ್ತಿ ಹುಲಿಯಯ್ಯನ ಹೆಸರಿಗೆ ಇತ್ತು ಎಂದರೆ ಸರಿ. ಪ್ರತಿವಾದಿಗಳ ಮನೆತನ ಕಿವುಡು ಮನೆತನ ಮತ್ತು ಅವರ ಮನೆತನದ ಸದಸ್ಯರಿಗೆ ವ್ಯವಹಾರ ಜ್ಞಾನ ಕಡಿಮೆ ಎಂದರೆ ಸರಿಯಲ್ಲ. ದಿನಾಂಕ 11-10-2004 ರಂದು ನಾನು ಪ್ರತಿವಾದಿಗಳ ಮನೆಗೆ ಹೋಗಿ ಪಾಲುಪಾರಿಕತ್ತು ಮಾಡಿಕೊಳ್ಳಲು ಪಂಚಾಯತಿ ಕೂಡಿಸಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಂದೂರು ಗ್ರಾಮದ ಸರ್ವೆ ನಂಬರ 27/2 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ಹಂಚಿಕೆ ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚಾಯತಿ ಪಾರಿಕತ್ತಿಗೆ ನಾನು ಕೂಡಾ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಒಬ್ಬ ಶಿವಮೂರ್ತಿ ಕೊಡಾ ನಮ್ಮ ಜೊತೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಊರಿನ ಯೋಗಿಶ ಎಂಬುವರು ಸದರಿ ದಾಖಲೆಯನ್ನುಬರೆದಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಅಕ್ರಮ ಲಾಭ ಪಡೆದುಕೊಳ್ಳಲು ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಎಂ.ಆರ್. ಸಂಖ್ಯೆ 31 ಅನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅದನ್ನು ಹಾಜರು ಮಾಡಿದರೆ ಸತ್ಯ ಸಂಗತಿ ಹೊರಗೆ ಬರುತ್ತದೆ ಎಂದು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಮೂಲ ಕ್ರಯ ಪತ್ರ ಹಾಜರು ಮಾಡಲು ಕೂಡಾ ನನಗೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 5 ರಲ್ಲಿ ಹುಲಿಯಯ್ಯನ ಹೆಸರು ಇದೆ ಎಂದರೆ ಸರಿ. ನಿಪಿ.8 ದಾವಾ ಆಸ್ತಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಬೇರೆ ವ್ಯಕ್ತಿ ಮತ್ತು ಬೇರೆ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

ಮುಂದಿನ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***